ಸಂಸ್ಥೆಯ ಅಧ್ಯಕ್ಷರಾದ

**ಶ್ರೀ ಐ.ಎಸ್.ಎನ್. ಪ್ರಸಾದ್,** ಭಾ.ಆ.ಸೇ.

ದಿನಾಂಕ: 16ನೇ ಜೂನ್, 2023ರಂದು
ಸಂಸ್ಥೆಯ 64ನೇ ವಾರ್ಷಿಕ ಮಹಾಸಭೆಯಲ್ಲಿ
ಮಾಡಿದ ಭಾಷಣ






ಉದ್ಯಮಶೀಲತೆ ಅಭಿವೃದ್ಧಿಗೆ 64 ವರ್ಷಗಳ ಸುದೀರ್ಘ ಸೇವೆ

64 years of accomplished service for entrepreneurship development

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

Karnataka State Financial Corporation



**ಶ್ರೀ ಐ ಎಸ್ ಎನ್ ಪ್ರಸಾದ್,** ಭಾ.ಆ.ಸೇ

**ಅಧ್ಯಕ್ಷರು**

**Sri I S N PRASAD,** IAS

Chairman

**ಶ್ರೀ ಐ. ಎಸ್. ಎನ್. ಪ್ರಸಾದ್,** ಭಾ.ಆ.ಸೇ.

ಅಧ್ಯಕ್ಷರು

## ದಿನಾಂಕ 16ನೇ ಜೂನ್ 2023ರಂದು ಸಂಸ್ಥೆಯ 64ನೇ ವಾರ್ಷಿಕ ಮಹಾಸಭೆಯಲ್ಲಿ ಮಾಡಿದ ಭಾಷಣ

**ಆತ್ಮೀಯ ಷೇರುದಾರರೇ,**

ಸಂಸ್ಥೆಯ 64ನೇ ವಾರ್ಷಿಕ ಮಹಾಸಭೆಗೆ ತಮಗೆಲ್ಲಾ ಸ್ವಾಗತ ಬಯಸಲು ಹರ್ಷ ವಾಗುತ್ತಿದೆ. 31ನೇ ಮಾರ್ಚ್ 2023ಕ್ಕೆ ಅಂತ್ಯಗೊಂಡ ಸಂಸ್ಥೆಯ ಕಾರ್ಯಾಚರಣೆಯ 64ನೇ ವಾರ್ಷಿಕ ವರದಿ ಹಾಗೂ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳನ್ನು ಮಂಡಿಸಲು ನನಗೆ ಹರ್ಷವಾಗುತ್ತದೆ.

ಪ್ರಸಕ್ತ 2022–23ನೇ ಸಾಲಿನ ಆರ್ಥಿಕ ಸ್ಥಿತಿಯನ್ನು ಕ್ರೋಢೀಕರಿಸಲಾಗಿದ್ದು, ತೆರಿಗೆ ಪೂರ್ವ ರೂ.138.78 ಕೋಟಿಗಳ ದಾಖಲೆ ಲಾಭವನ್ನು ಗಳಿಸಿದೆ ಹಾಗೂ ರೂ.107.31 ಕೋಟಿಗಳ ತೆರಿಗೆ ನಂತರದ ಲಾಭವನ್ನು ಗಳಿಸಿದೆ.

ಸಂಸ್ಥೆಯ ನಿರ್ದೇಶಕರ ಮಂಡಳಿಯ 64ನೇ ವಾರ್ಷಿಕ ವರದಿ ಮತ್ತು 31ನೇ ಮಾರ್ಚ್ 2023ಕ್ಕೆ ಅಂತ್ಯಗೊಂಡ ಲೆಕ್ಕಪತ್ರದ ವಿವರಗಳನ್ನು ತಮಗೆಲ್ಲರಿಗೂ ಈಗಾಗಲೇ ತಲುಪಿಸಲಾಗಿದ್ದು, ತಾವೆಲ್ಲರೂ ಅದನ್ನು ಪರಾಮರ್ಶಿಸಿದ್ದೀರೆಂದು ಭಾವಿಸಿದ್ದೇನೆ. ಆದಾಗ್ಯೂ 2022–23ರಲ್ಲಿ ಸಂಸ್ಥೆಯ ಪ್ರಗತಿಯ ಪ್ರಮುಖ ಅಂಶಗಳನ್ನು ಪರಿಶೀಲಿಸುವ ಮುನ್ನ ಜಾಗತಿಕ, ರಾಷ್ಟ್ರ ಹಾಗೂ ರಾಜ್ಯದ ಆರ್ಥಿಕತೆಯ ಪಕ್ಷಿನೋಟವನ್ನು ಪರಾಮರ್ಶಿಸಬಹುದು.

**ಜಾಗತಿಕ ಆರ್ಥಿಕ ನೋಟ:**

ಹಿಂದೆ ಉಂಟಾದ ಅನೇಕ ಜಾಗತಿಕ ಆರ್ಥಿಕ ಹೊಡೆತಗಳು ತೀವ್ರವಾಗಿದ್ದರೂ ಕಾಲಾಂತರದ ಅಂತರವನ್ನು ಹೊಂದಿದ್ದವು. ಪ್ರಸಕ್ತ ಶತಮಾನದ 3ನೇ ದಶಕದ 2020ರಿಂದ 2023ರವರಗೆ ಕ್ಷಿಪ್ರವಾಗಿ ಮೂರು ಹೊಡೆತಗಳು ಜಾಗತಿಕ ಆರ್ಥಿಕ ವ್ಯವಸ್ಥೆಗೆ ವಿಷಮ ಪರಿಸ್ಥಿತಿಯನ್ನು ಸೃಷ್ಟಿಸಿತು. 2020ರ ಕೋವಿಡ್ ಸಾಂಕ್ರಾಮಿಕ ರೋಗದ

ಪ್ರಚೋದನೆಯೊಂದಿಗೆ ಪ್ರಾರಂಭವಾಗಿ, ಜಾಗತಿಕ ಉತ್ಪಾದನೆಯ ಕಡಿತದ ಪರಿಣಾಮ ತದನಂತರದ ರಷ್ಯಾ–ಉಕ್ರೇನ್ ದೇಶಗಳ ಸಂಘರ್ಷದ ಪರಿಣಾಮದಿಂದಾಗಿ ವಿಶ್ವದ ಆರ್ಥಿಕತೆಯು ಹಣದುಬ್ಬರದ ಪರಿಣಾಮಕ್ಕೆ ಒಳಗಾಯಿತು.

**ಭಾರತದ ಆರ್ಥಿಕತೆ:**

ಭಾರತ ದೇಶವು 2022ರಲ್ಲಿ ಸ್ವಾತಂತ್ರ್ಯದ 'ಅಮೃತ ಮಹೋತ್ಸವ'ವನ್ನು ಆಚರಿಸಲಾಯಿತು. ಪ್ರಸ್ತುತ ಭಾರತದ ಆರ್ಥಿಕತೆಯು ಅಮೆರಿಕನ್ ಡಾಲರ್ ಮೌಲ್ಯಗಳಲ್ಲಿ ವಿಶ್ವದ 5ನೇ ದೊಡ್ಡ ಆರ್ಥಿಕತೆಯಾಗಿ ಅಭಿವೃದ್ಧಿ ಹೊಂದಿದೆ. ಭಾರತೀಯ ಆರ್ಥಿಕತೆ 2023ರ ದೇಶಿಯ ಒಟ್ಟು ಉತ್ಪನ್ನವು ಶೇ.7ರಷ್ಟು ಬೆಳವಣಿಗೆಯಾಗಲಿದೆ ಎಂದು ಅಂದಾಜಿಸಲಾಗಿದೆ. ಹಣಕಾಸು ವರ್ಷ 2022–23ರಲ್ಲಿ ಕೃಷಿ ಕ್ಷೇತ್ರವು ಶೇ.3.5ರಷ್ಟು ಬೆಳೆಯುವ ನಿರೀಕ್ಷೆಯಿದೆ. ಕೈಗಾರಿಕಾ ವಲಯವು ಶೇ.4.1ರಷ್ಟು ಸಾಧಾರಣ ಬೆಳವಣಿಗೆಗೆ ಸಾಕ್ಷಿಯಾಗಿದೆ. ಹಣಕಾಸು ವರ್ಷ 2021–22ರಲ್ಲಿ ಶೇ.8.4 ವಾರ್ಷಿಕ ಬೆಳವಣಿಗೆಯಿಂದ ಹಣಕಾಸು ವರ್ಷ 2022–23ರಲ್ಲಿ ಸೇವಾಕ್ಷೇತ್ರವು ವಿಶ್ವದ ಅತಿ ದೊಡ್ಡ ಕೋವಿಡ್–19ರ ಲಸಿಕೆ ಕಾರ್ಯಕ್ರಮದಿಂದ ಶೇ.9.1ಕ್ಕೆ ಬೆಳವಣಿಗೆಯಾಗಿದೆ.

ನಿರಂತರ ಪೂರೈಕೆ ಸರಪಳಿ ಅಡ್ಡಿ ಮತ್ತು ಅನಿಶ್ಚಿತ ಭೌಗೋಳಿಕ ರಾಜಕೀಯ ಬೆಳವಣಿಗೆಯ ಹೊರತಾಗಿಯೂ ಭಾರತದ ರಫ್ತು ವಹಿವಾಟುಗಳು ಹಣಕಾಸು ವರ್ಷ 2022–23ರಲ್ಲಿ ಶೇ.12.5ರಷ್ಟು ಬೆಳೆದಿದೆ ಎಂದು ಅಂದಾಜಿಸಲಾಗಿದೆ.

ದೇಶಿಯ ಒಟ್ಟು ರಾಷ್ಟ್ರೀಯ ಉತ್ಪನ್ನದಲ್ಲಿ ರಫ್ತು ಪಾಲು ಹಣಕಾಸು ವರ್ಷ 2021–22ರಲ್ಲಿ ಶೇ.21.50ಕ್ಕೆ ಹೋಲಿಸಿದರೆ ಹಣಕಾಸು ವರ್ಷ 2022–23ರಲ್ಲಿ ಶೇ.22.70ಕ್ಕೆ ಏರಿಕೆಯಾಗಿದೆ.

**ಕರ್ನಾಟಕ ರಾಜ್ಯದ ಆರ್ಥಿಕತೆ:**

ಕರ್ನಾಟಕವು ವೈವಿಧ್ಯಮಯ ಸಂಸ್ಕೃತಿ ಮತ್ತು ಭಾಷೆಗಳ ಹಾಗೂ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳನ್ನು ಹೊಂದಿರುವ ರಾಜ್ಯವಾಗಿರುತ್ತದೆ. ಇದು ರಾಷ್ಟ್ರಮಟ್ಟದ ಪ್ರಚಲಿತ ವ್ಯವಸ್ಥೆಯನ್ನು ಹಲವು ವಿಧಗಳಲ್ಲಿ ಪ್ರತಿಬಿಂಬಿಸುತ್ತದೆ.

ಕರ್ನಾಟಕ ರಾಜ್ಯದ ಆಂತರಿಕ ಉತ್ಪನ್ನವು 2021–22ನೇ ಸಾಲಿನಲ್ಲಿ ರೂ.19,62,000.00 ಕೋಟಿಗಳಾಗಿದ್ದು, 2022–23ನೇ ಸಾಲಿನಲ್ಲಿ ಶೇ.14.2ರ ಬೆಳವಣಿಗೆಯೊಂದಿಗೆ ರೂ.22,41,000.00 ಕೋಟಿಗಳಷ್ಟು ಆಗುವ ನಿರೀಕ್ಷೆ ಇದೆ. ಪ್ರಸಕ್ತ ಬೆಲೆಗಳಲ್ಲಿ 2021–22ನೇ ಸಾಲಿನಲ್ಲಿ ರಾಜ್ಯದ ನಿವ್ವಳ ತಲಾ ಆದಾಯವು 2,65,623.00 ರೂಪಾಯಿಗಳಷ್ಟಿದ್ದು, ಇದು 2022–23ನೇ ಸಾಲಿಗೆ ಶೇ.13.6ರಷ್ಟು ಹೆಚ್ಚಳದೊಂದಿಗೆ 3,01,673.00 ರೂಪಾಯಿಗಳಷ್ಟಾಗುವುದೆಂದು ಅಂದಾಜಿಸಲಾಗಿದೆ. ಕರ್ನಾಟಕ ರಾಜ್ಯದ ತಲಾ ಆದಾಯವು ರಾಷ್ಟ್ರೀಯ ತಲಾ ಆದಾಯಕ್ಕಿಂತಲೂ ಹೆಚ್ಚಳವಾಗಿರುತ್ತದೆ.

2021–22ನೇ ಸಾಲಿನ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಕೃಷಿ ವಲಯದ ಕೊಡುಗೆ ಶೇ.15.36ರಷ್ಟಿದ್ದು, 2022–23ನೇ ಸಾಲಿನಲ್ಲಿ ಶೇ.15.08ಕ್ಕೆ ಇಳಿಕೆಯಾಗಿರುತ್ತದೆ. 2021–22ನೇ ಸಾಲಿನಲ್ಲಿ ಕೈಗಾರಿಕಾ ವಲಯದ ಕೊಡುಗೆ ಶೇ.21.48ರಷ್ಟಿದ್ದು 2022–23ನೇ ಸಾಲಿನಲ್ಲಿ ಶೇ.20.88ಕ್ಕೆ ಇಳಿಕೆಯಾಗಿರುತ್ತದೆ. ಒಟ್ಟು ಆಂತರಿಕ ಉತ್ಪನ್ನದಲ್ಲಿ ಸೇವಾ ವಲಯದ ಕೊಡುಗೆಯು ಅಧಿಕವಾಗಿದ್ದು, 2021–22ನೇ ಸಾಲಿನಲ್ಲಿ ಶೇ.63.16ರಷ್ಟಿದ್ದು 2022–23ನೇ ಸಾಲಿನಲ್ಲಿ ಶೇ.64.04ಕ್ಕೆ ಏರಿಕೆಯಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. 2022–23ನೇ ವರ್ಷದಲ್ಲಿ 'ಸ್ಥಿರಾಸ್ತಿ' ವೃತ್ತಿಪರ ಸೇವೆಗಳು ಮತ್ತು ವಾಸಗೃಹಗಳ ಒಡೆತನ' ವಲಯದ ಕೊಡುಗೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಅತಿ ಹೆಚ್ಚು ಅಂದರೆ ಶೇ.34.31ರಷ್ಟಿರುತ್ತದೆ. ನಂತರದ ಸ್ಥಾನಗಳಲ್ಲಿ 'ಗಣಕಯಂತ್ರ ಮತ್ತು ಸಂಬಂಧಿತ ಸೇವೆಗಳು (ಶೇ.24.34)' ಮತ್ತು ತಯಾರಿಕಾ ವಲಯ (ಶೇ.13.28) ಹಾಗೂ 'ವ್ಯಾಪಾರ ಮತ್ತು ದುರಸ್ತಿ ಸೇವೆಗಳು (ಶೇ.9.52)' ವಲಯಗಳು ಇರುತ್ತವೆ.

ಹಣಕಾಸು ವರ್ಷ 2022–23ರ (ಸೆಪ್ಟೆಂಬರ್–2022)ರವೆಗೆ ರಾಜ್ಯದ ಒಟ್ಟು ರಫ್ತು ಮೌಲ್ಯವು 5,90,312.28 ಕೋಟಿ ರೂ.ಗಳಾಗಿರುತ್ತದೆ. ಏಪ್ರಿಲ್‌ನಿಂದ ಸೆಪ್ಟೆಂಬರ್ 2021–22ಕ್ಕೆ ಹೋಲಿಸಿದರೆ 2022–23ರ ಏಪ್ರಿಲ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ ಮರ್ಚಂಡೈಸ್ ರಫ್ತು ಶೇ.26ರಷ್ಟು ಬೆಳವಣಿಗೆಯನ್ನು ಕಂಡಿದೆ. ಏಪ್ರಿಲ್‌ನಿಂದ ಸೆಪ್ಟೆಂಬರ್ 2021–22ಕ್ಕೆ ಹೋಲಿಸಿದರೆ 2022–23ರ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗಿನ ಅವಧಿಯಲ್ಲಿ ಸೇವೆಗಳ ರಫ್ತು ಶೇ.30ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ. ರಾಜ್ಯದ ಎಲೆಕ್ಟ್ರಾನಿಕ್ಸ್

ಮತ್ತು ಕಂಪ್ಯೂಟರ್ ಸಾಫ್ಟ್‌ವೇರ್ ರಫ್ತು ಮೌಲ್ಯವು ಶೇ.80.54ರಷ್ಟಾಗಿರುತ್ತದೆ ಹಾಗೂ ಮರ್ಚಂಡೈಸ್ ರಫ್ತು ಶೇ.19.46ರಷ್ಟಾಗಿರುತ್ತದೆ.

ಪ್ರಸಕ್ತ ಹಣಕಾಸು ವರ್ಷ 2022–23ರಲ್ಲಿ ರಾಜ್ಯದ ಏಕಗವಾಕ್ಷಿ ಯೋಜನಾ ಮಂಜೂರಾತಿ ಸಮಿತಿಯ ಮೂಲಕ ರಾಜ್ಯವು ಬಂಡವಾಳವನ್ನು ಆಕರ್ಷಿಸುತ್ತಿದೆ. ಪ್ರಸಕ್ತ ವರ್ಷದಲ್ಲಿ 355 ಯೋಜನೆಗಳಿಂದ 16,680.57 ಕೋಟಿ ರೂ.ಗಳ ಮೊತ್ತದ ಉದ್ದೇಶಿತ ಬಂಡವಾಳ ಹೂಡಿಕೆಗೆ ಅನುಮೋದನೆ ನೀಡಿದೆ. ಈ ಎಲ್ಲಾ ಕೈಗಾರಿಕಾ ಯೋಜನೆಗಳಿಂದ ಸುಮಾರು 57,870 ಉದ್ಯೋಗಾವಕಾಶ ಸೃಷ್ಟಿಯಾಗಲಿದೆ. ರಾಜ್ಯದ ಉನ್ನತ ಮಟ್ಟದ ಯೋಜನಾ ಮಂಜೂರಾತಿ ಸಮಿತಿಯು 38 ಬೃಹತ್ ಕೈಗಾರಿಕಾ ಯೋಜನೆಗಳಿಂದ 2,20,268.25 ಕೋಟಿ ರೂ.ಗಳ ಉದ್ದೇಶಿತ ಬಂಡವಾಳ ಹೂಡಿಕೆಗೆ ಅನುಮೋದನೆ ನೀಡಿದ್ದು, ಈ 38 ಬೃಹತ್ ಯೋಜನೆಗಳಿಂದ ಸುಮಾರು 1,37,282 ಉದ್ಯೋಗಾವಕಾಶ ರಾಜ್ಯದಲ್ಲಿ ಸೃಷ್ಟಿಯಾಗಲಿದೆ.

ಕರ್ನಾಟಕ ರಾಜ್ಯವು ವಿದೇಶಿ ನೇರ ಬಂಡವಾಳ ಆಕರ್ಷಿಸುವುದರಲ್ಲಿ ಹೆಚ್ಚಿನ ಪಾಲು ಹೊಂದಿದ್ದು ಏಪ್ರಿಲ್ 2022ರಿಂದ ಸೆಪ್ಟೆಂಬರ್ 2022ರವರೆಗೆ ಭಾರತದ 26 ರಾಜ್ಯಗಳಲ್ಲಿ (ರೂ.2,10,156.27 ಕೋಟಿ) ವಿದೇಶಿ ನೇರ ಬಂಡವಾಳ ಒಳಹರಿವಿನಲ್ಲಿ ಕರ್ನಾಟಕ ರಾಜ್ಯಕ್ಕೆ (ರೂ.41,677.56 ಕೋಟಿ) ವಿದೇಶಿ ನೇರ ಬಂಡವಾಳದ ಒಳಹರಿವು ದೊರೆತಿದ್ದು ರಾಜ್ಯವು ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ.

ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳು ರಾಜ್ಯದ ಕೈಗಾರಿಕಾ ಅಭಿವೃದ್ಧಿಗೆ ಪ್ರಮುಖ ಕೊಡುಗೆ ನೀಡಿದೆ, ಪ್ರಸಕ್ತ ಹಣಕಾಸು ವರ್ಷ 2022–23ರಲ್ಲಿ (ನವೆಂಬರ್ 2022ರ ಅಂತ್ಯದವರೆಗೆ) 5,85,504 ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ನೂತನ ಕೈಗಾರಿಕೆಗಳು ರಾಜ್ಯದಲ್ಲಿ ನೋಂದಾಯಿಸಿಕೊಂಡಿದ್ದು 50,81,047 ಉದ್ಯೋಗವಕಾಶ ಸೃಷ್ಟಿಯಾಗಲಿದೆ.

**ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ರಾಜ್ಯ ಸರ್ಕಾರದ ಬೆಂಬಲ:**

ಪ್ರಸ್ತುತ ಹಣಕಾಸು ವರ್ಷದಲ್ಲಿ ಕರ್ನಾಟಕ ಸರ್ಕಾರವು ಸಂಸ್ಥೆಗೆ 54.60 ಕೋಟಿ ರೂ.ಗಳ ಈಕ್ವಿಟಿ ಬಂಡವಾಳವನ್ನು ಹಾಗೂ 173.62 ಕೋಟಿ ರೂ.ಗಳ ಬಡ್ಡಿ

ಸಹಾಯಧನದ ನೆರವನ್ನು ಹಲವು ಯೋಜನೆಗಳಡಿಯಲ್ಲಿ ಒದಗಿಸಿದ್ದು, ಅವುಗಳ ವಿವರ ಈ ಕೆಳಗಿನಂತಿವೆ:

| ಕ್ರ. ಸಂ. | ಯೋಜನಾವಾರು ವಿವರಗಳು | ಮೊತ್ತ (ಕೋಟಿ ರೂ.ಗಳಲ್ಲಿ) |
|---|---|---|
| 01 | ಪರಿಶಿಷ್ಟ ಜಾತಿ ಉದ್ದಿಮೆದಾರರಿಗೆ ಬಡ್ಡಿ ಸಹಾಯ ಧನ ಯೋಜನೆ | 55.87 |
| 02 | ಪರಿಶಿಷ್ಟ ಪಂಗಡಗಳ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ | 10.00 |
| 03 | ಮಹಿಳಾ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ | 50.00 |
| 04 | ಇತರೇ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ ಮತ್ತು ಮೊದಲ ಪೀಳಿಗೆ ಉದ್ದಿಮೆದಾರರ ಯೋಜನೆ | 57.75 |
| | **ಒಟ್ಟು** | **173.62** |

**ಸಹಾಯಧನ ಮತ್ತು ಅನುದಾನಗಳ ವಿವರಗಳು:**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉದ್ಯಮಿಗಳು ಸ್ಥಾಪಿಸುವ ಜವಳಿ ಮತ್ತು ಕೈಮಗ್ಗಗಳಿಗೆ ವಿಶೇಷ ಅನುದಾನ ಯೋಜನೆಯಡಿಯಲ್ಲಿ ಕರ್ನಾಟಕ ಸರ್ಕಾರವು 19.75 ಕೋಟಿ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಿದೆ.

**2022–23ನೇ ವಿತ್ತೀಯ ವರ್ಷದ ಪ್ರಮುಖ ನೀತಿ ನಿರ್ಧಾರಗಳು:**

❖ ಸಂಸ್ಥೆಯ ವಿಶೇಷ ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ಮಂಜೂರಾದ ಸಾಲಗಳಿಗೆ ನಿವ್ವಳ ಬಡ್ಡಿ ಬಾಕಿಯನ್ನು ಪಾವತಿಸಲು ಸಾಲಗಾರರಿಗೆ ಅನುಮತಿ ನೀಡಲಾಯಿತು.

❖ ಸಂಸ್ಥೆಯ ಸ್ಟಾಫ್ ಬೆನೊವೆಲೆಂಟ್ ಫಂಡ್ (ಎಸ್.ಬಿ.ಎಫ್) ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡಲಾಯಿತು.

❖ ಪ್ರಸಕ್ತ ಹಣಕಾಸು ವರ್ಷದಲ್ಲಿ ರಾಜ್ಯದ 'ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ' ಉಪ ವ್ಯವಸ್ಥಾಪಕ (ಕಾನೂನು) ಹುದ್ದೆಗಳಿಗೆ ನೇಮಕಾತಿ ಮಾಡಲಾಯಿತು.

❖ ಸಂಸ್ಥೆಯ ವೃಂದ ಹಾಗೂ ನೇಮಕಾತಿ 2022ರ (C & R Rules) ನಿಯಮಗಳನ್ನು ಪ್ರಕಟಿಸಲಾಯಿತು.

❖ ಪ್ರಸಕ್ತ ಹಣಕಾಸು ವರ್ಷದಲ್ಲಿ ಸಂಸ್ಥೆಯ ನಿರ್ದೇಶಕ ಮಂಡಳಿಯು ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ಬಾಕಿಯಿರುವ ಅರ್ಜಿಗಳಲ್ಲಿ 05 ಚಾಲಕರು ಮತ್ತು 15 ಅಟೆಂಡರ್‌ಗಳ ಹುದ್ದೆಗಳನ್ನು ಹಿರಿತನದ ಆಧಾರದ ಮೇಲೆ ನೇಮಕಾತಿ ಮಾಡಲಾಯಿತು.

❖ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಉದ್ಯಮಿಗಳಿಗೆ ಮಾರ್ಪಡಿಸಲಾದ ಜವಳಿ ಮತ್ತು ಕೈಮಗ್ಗಗಳ ಘಟಕಗಳಿಗೆ ವಿಶೇಷ ಅನುದಾನ ಯೋಜನೆಯನ್ನು ಮರು ಅನುಷ್ಠಾನಗೊಳಿಸಲಾಯಿತು.

❖ ಸಂಸ್ಥೆಯ ಮಾಡಿಫೈಡ್ ಕ್ರಾನಿಕ್ ಅಸೆಟ್ ರೆಸಲ್ಯೂಷನ್ (MCAR) 2021 ತಿದ್ದುಪಡಿ ಯೋಜನೆಯನ್ನು ಪೋಸ್ಟ್ ಎಂ.ಒ.ಯು.ಡಿ– III (POST MOU D-III) ಮತ್ತು ಅನುತ್ಪಾದಕ ಸ್ವತ್ತುಗಳಿಗೆ (NPA) ವಿಸ್ತರಿಸಲಾಯಿತು.

**ಕಾರ್ಯಾಚರಣೆಯ ಮುಖ್ಯಾಂಶಗಳು:**

**ಮಂಜೂರಾತಿಗಳು:**

2022–23ರ ಹಣಕಾಸು ವರ್ಷದಲ್ಲಿ ವಿವಿಧ ಸಾಲ ಯೋಜನೆಗಳ ಮೂಲಕ 710 ಉದ್ಯಮಗಳಿಗೆ ಪ್ರಕರಣಗಳಿಗೆ 901.10 ಕೋಟಿ ರೂ.ಗಳನ್ನು ಮಂಜೂರು ಮಾಡಲಾಗಿದೆ. 2023ರ ಮಾರ್ಚ್ ಅಂತ್ಯದವರೆಗೆ 1,75,833 ಉದ್ಯಮಗಳಿಗೆ 19,680.73 ಕೋಟಿ ರೂ. ಗಳ ಸಂಚಿತ ಸಾಲ ಮಂಜೂರಾತಿ ಮಾಡಲಾಗಿದೆ.

**ವಿತರಣೆ:**

2022–23ನೇ ಸಾಲಿನಲ್ಲಿ ಸಂಸ್ಥೆಯು 445.81 ಕೋಟಿ ರೂ.ಗಳನ್ನು ವಿತರಣೆ ಮಾಡಿದೆ. ಕಳೆದ ವರ್ಷ 386.46 ಕೋಟಿ ರೂ.ಗಳನ್ನು ವಿತರಣೆ ಮಾಡಿತ್ತು. 31–03–2023ರವರೆಗಿನ ಸಂಚಿತ ವಿತರಣೆ 15,222.10 ಕೋಟಿ ರೂ.ಗಳಷ್ಟು ತಲುಪಿದೆ.

**ಬಂಡವಾಳ, ಉತ್ಪನ್ನಗಳ ಮೌಲ್ಯ ಮತ್ತು ಉದ್ಯೋಗ:**

2022–23ನೇ ಸಾಲಿನಲ್ಲಿ ಸಂಸ್ಥೆಯಿಂದ ನೀಡಲಾದ ಸಾಲಗಳನ್ನೊಳಗೊಂಡು 4,555.13 ಕೋಟಿ ರೂ.ಗಳಷ್ಟು ಬಂಡವಾಳ ಹೂಡಿಕೆ ಮಾಡಬಹುದೆಂದು ಅಂದಾಜು ಮಾಡಲಾಗಿದ್ದು ಉತ್ಪಾದನೆಯ ಮೌಲ್ಯ 2,775.69 ಕೋಟಿ. ರೂ.ಗಳಾಗಿದ್ದು, 11,235 ಜನರಿಗೆ ಉದ್ಯೋಗ ಸೃಷ್ಟಿಸುವ ಅಂದಾಜು ಮಾಡಲಾಗಿದೆ.

**ವಸೂಲಾತಿ:**

ಪ್ರಸ್ತುತ 2022–23ರ ವರ್ಷದಲ್ಲಿ ಸಂಸ್ಥೆ ಒಟ್ಟು 763.71 ಕೋಟಿ ರೂ.ಗಳನ್ನು ವಸೂಲಾತಿ ಮಾಡಿತು. ಕಳೆದ ವರ್ಷ ಸಂಸ್ಥೆಯು 741.89 ಕೋಟಿ ರೂ.ಗಳನ್ನು ವಸೂಲಿ ಮಾಡಿತ್ತು. ಪ್ರಸ್ತುತ ವರ್ಷದಲ್ಲಿ ವಸೂಲಾಗದ ಸಾಲಗಳಿಂದ [D-III (Pre MOU), D-III (Prudential) & (MR)] ಸಂಸ್ಥೆಯು 63.51 ಕೋಟಿ ರೂ.ಗಳನ್ನು ವಸೂಲಾತಿ ಮಾಡಲಾಗಿದೆ.

**ಹಣಕಾಸು ಫಲಿತಾಂಶಗಳು:**

ಪ್ರಸ್ತುತ ಹಣಕಾಸು ವರ್ಷದಲ್ಲಿ ಸಂಸ್ಥೆಯು 354.67 ಕೋಟಿ ರೂ.ಗಳ ಒಟ್ಟಾರೆ ಆದಾಯವನ್ನು ಗಳಿಸಿದ್ದು, ಕಳೆದ ಹಣಕಾಸು ವರ್ಷ ಈ ಆದಾಯವು 359.02 ಕೋಟಿ ರೂ.ಗಳಾಗಿತ್ತು. ಸಂಸ್ಥೆಯು ಆರ್ಥಿಕ ಸ್ಥಿತಿಯನ್ನು ಕ್ರೋಢೀಕರಿಸಿ ರೂ. 138.78 ಕೋಟಿಗಳ ತೆರಿಗೆಗೆ ಪೂರ್ವ ಲಾಭವನ್ನು ಗಳಿಸಿದೆ ಹಾಗೂ ರೂ.107.31 ಕೋಟಿಗಳ ತೆರಿಗೆ ನಂತರದ ಲಾಭವನ್ನು ಗಳಿಸಿದೆ.

**ಲಾಭಾಂಶ:**

2022.23ರ ಹಣಕಾಸು ವರ್ಷದಲ್ಲಿಯೂ ಮುಂದುವರೆದ ನಷ್ಟವಿದ್ದುದ್ದರಿಂದ (carried forward losses) ಸಂಸ್ಥೆಯ ವತಿಯಿಂದ ಯಾವುದೇ ರೀತಿಯ ಲಾಭಾಂಶವನ್ನು ಶಿಫಾರಸ್ಸು ಮಾಡಿರುವುದಿಲ್ಲ.

**ಖಜಾನೆ ಚಟುವಟಿಕೆ:**

ಪ್ರಸಕ್ತ ಹಣಕಾಸು ವರ್ಷದಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ರೂ.54.60 ಕೋಟಿಗಳ ಈಕ್ವಿಟಿ ಷೇರು ಬಂಡವಾಳ ನೀಡಿರುತ್ತದೆ. ದಿನಾಂಕ 31–03–2023ರ ಅಂತ್ಯಕ್ಕೆ ರೂ.945.39 ಕೋಟಿಗಳ ಈಕ್ವಿಟಿ ಷೇರು ಬಂಡವಾಳವಿರುತ್ತದೆ ಹಾಗೂ ಕಳೆದ ಹಣಕಾಸು ವರ್ಷದ ಅಂತ್ಯಕ್ಕೆ 895.39 ಕೋಟಿ ರೂ.ಗಳು ಇರುತ್ತದೆ. ಪ್ರಸ್ತುತ ಹಣಕಾಸು ವರ್ಷದಲ್ಲಿ ರೂ.50.00 ಕೋಟಿಗಳ ಷೇರು ಅರ್ಜಿ ಮೊತ್ತವನ್ನು ಷೇರು ಬಂಡವಾಳವಾಗಿ ಪರಿವರ್ತಿಸಲಾಗಿದೆ. ದಿನಾಂಕ 31–03–2023ರ ಅಂತ್ಯಕ್ಕೆ ರೂ.54.60 ಕೋಟಿಗಳ ಷೇರು ಅರ್ಜಿ ಮೊತ್ತವಿರುತ್ತದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಸಂಸ್ಥೆಯು ರೂ.225.00 ಕೋಟಿಗಳ ಬಾಂಡುಗಳನ್ನು ಪಾವತಿಸಿದೆ. ಬಾಕಿ ಉಳಿದ ಬಾಂಡುಗಳು ರೂ.475.00 ಕೋಟಿಗಳಿಗೆ ಇಳಿಕೆಯಾಗಿದ್ದು ಈ ಮೊತ್ತ 31.03.2022ರ ಅಂತ್ಯಕ್ಕೆ ರೂ.700.00 ಕೋಟಿಗಳಷ್ಟಿತ್ತು.

ಪ್ರಸಕ್ತ ಹಣಕಾಸು ವರ್ಷದಲ್ಲಿ ಸಂಸ್ಥೆಯು ಹೆಚ್.ಡಿ.ಎಫ್.ಸಿ ಬ್ಯಾಂಕಿನಿಂದ ರೂ.100.00 ಕೋಟಿಗಳ ಅವಧಿ ಸಾಲವನ್ನು ಪಡೆಯಲಾಗಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಸಂಸ್ಥೆಯು ರೂ.85.83 ಕೋಟಿಗಳ ಮೊತ್ತವನ್ನು ಭಾರತೀಯ ಸ್ಟೇಟ್ ಬ್ಯಾಂಕ್‌ಗೆ, ರೂ.20.00 ಕೋಟಿಗಳ ಮೊತ್ತವನ್ನು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾಗೆ ಹಾಗೂ 18.33 ಕೋಟಿ ರೂ.ಗಳನ್ನು ಹೆಚ್.ಡಿ.ಎಫ್.ಸಿ ಬ್ಯಾಂಕಿಗೆ ಅವಧಿ ಸಾಲದ ಮೊತ್ತಕ್ಕೆ ಮರುಪಾವತಿಸಲಾಗಿದೆ.

ಹಣಕಾಸು ವರ್ಷ 2021–22ರಲ್ಲಿನ ಬಾಂಡ್‌ಗಳ ಮೇಲಿನ ಬಡ್ಡಿಯು ರೂ.75.45 ಕೋಟಿಗಳಿಂದ, ಪ್ರಸ್ತುತ 2022–23ರ ಹಣಕಾಸು ವರ್ಷದಲ್ಲಿ ರೂ.57.55 ಕೋಟಿಗಳಿಗೆ ಇಳಿಕೆಯಾಗಿದೆ. ಬಾಂಡ್ ಹೊಣೆಗಾರಿಕೆ ಕಡಿಮೆಯಾದ ಕಾರಣ ಬಡ್ಡಿ ಮೊತ್ತ ಇಳಿಕೆಯಾಗಿದೆ. ಮುಂದುವರಿದು, ಸಂಸ್ಥೆಯು ರೂ.17.53 ಕೋಟಿಗಳ ಮೊತ್ತವನ್ನು ಭಾರತೀಯ ಸ್ಟೇಟ್ ಬ್ಯಾಂಕ್‌ಗೆ, ರೂ.0.18 ಕೋಟಿಗಳ ಮೊತ್ತವನ್ನು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾಗೆ ಹಾಗೂ 6.28 ಕೋಟಿ ರೂ.ಗಳನ್ನು ಹೆಚ್.ಡಿ.ಎಫ್.ಸಿ ಬ್ಯಾಂಕಿಗೆ ಅವಧಿ ಸಾಲದ ಮೊತ್ತಕ್ಕೆ ಬಡ್ಡಿಯನ್ನು ಮರುಪಾವತಿಸಲಾಗಿದೆ. ಪ್ರಸ್ತುತ ಹಣಕಾಸು ವರ್ಷದಲ್ಲಿ ಸಂಸ್ಥೆಯು ಕರ್ನಾಟಕ ಸರ್ಕಾರಕ್ಕೆ ಖಾತರಿ ಕಮೀಷನ್ನಿನ

ರೂಪದಲ್ಲಿ ರೂ.8.51 ಕೋಟಿಗಳನ್ನು (ಜಿ.ಎಸ್.ಟಿ.ಯ ನಿವ್ವಳದಲ್ಲಿ) ಕ್ಯಾಷ್ ಬೇಸಿಸ್‌ನಂತೆ ಪಾವತಿಸಿದ್ದು, ಹಣಕಾಸು ವರ್ಷ 2021–22ರ ಸಾಲಿನಲ್ಲಿ ಈ ಮೊತ್ತವು ರೂ.12.22 ಕೋಟಿಗಳಷ್ಟಿತ್ತು (ಜಿ.ಎಸ್.ಟಿ.ಯ ನಿವ್ವಳದಲ್ಲಿ).

ಹಣಕಾಸು ವರ್ಷ 2021–22ರ ಅಂತ್ಯಕ್ಕೆ ಸಂಸ್ಥೆಯ ಒಟ್ಟು ದೀರ್ಘಾವಧಿ ಸಾಲದ ಮೊತ್ತವು ರೂ.1,025.60 ಕೋಟಿಗಳಿಂದ ಹಣಕಾಸು ವರ್ಷ 2022–23 ಅಂತ್ಯಕ್ಕೆ ರೂ.776.44 ಕೋಟಿಗಳಿಗೆ ಇಳಿಕೆ ಕಂಡಿದೆ. ಮುಂದುವರಿದು ಹಣಕಾಸು ವರ್ಷ 2021–22ರ ಅಂತ್ಯಕ್ಕೆ ಸಂಸ್ಥೆಯ ಒಟ್ಟು ಬಡ್ಡಿ ಮತ್ತು ಆರ್ಥಿಕ ವೆಚ್ಚಗಳ ಮೊತ್ತವು ರೂ.118.54 ಕೋಟಿಗಳಿಂದ ಪ್ರಸಕ್ತ ಹಣಕಾಸು ವರ್ಷ 2022–23 ಅಂತ್ಯಕ್ಕೆ ರೂ.93.33 ಕೋಟಿಗಳಿಗೆ ಇಳಿಕೆ ಕಂಡಿದೆ.

**ವ್ಯವಹಾರ ಅಭಿವೃದ್ಧಿ ಮತ್ತು ಸಾಲಗಳ ಸಂಶೋಧನೆ:**

ಪ್ರಸ್ತುತ ಹಣಕಾಸು ವರ್ಷ 2022–23ರಲ್ಲಿ ಜಾಗತಿಕ ಹೂಡಿಕೆದಾರರ ಸಭೆ 2022 ಹಾಗೂ ಕೈಗಾರಿಕಾ ಸಂಘಗಳಾದ ಕಾಸಿಯಾ, ಫೂ (FOWE) ಮಹಿಳಾ ಉದ್ಯಮಿಗಳ ಸಂಘ, ಕರ್ನಾಟಕ ಏರೋ ಟಿಕ್ನಿಕಲ್ ಅಡ್ವೈಸರಿಯ ಸಂಘ ಸಂಸ್ಥೆಗಳು ಆಯೋಜಿಸಿದ ಕೈಗಾರಿಕ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಂಸ್ಥೆಯನ್ನು ವಿಭಾಗವು ಪ್ರತಿನಿಧಿಸಿತು. ಪ್ರಸ್ತುತ ಹಣಕಾಸು ವರ್ಷದಲ್ಲಿ ಸಂಸ್ಥೆಯು ವಿವಿಧ ಕೈಗಾರಿಕೆ ಹಾಗೂ ಇತರೆ ಸಂಘ ಸಂಸ್ಥೆಗಳಿಗೆ ಪ್ರಾಯೋಜಕತ್ವ ಮತ್ತು ಪ್ರಚಾರ ಚಟುವಟಿಕೆಗಳಿಗೆ ಸುಮಾರು ರೂ.5.00 ಲಕ್ಷಗಳನ್ನು ನೀಡಲಾಗಿದೆ.

**ಹಣಕಾಸು ಸೇವೆಗಳ ಚಟುವಟಿಕೆಗಳು:**

ಸಾಮಾನ್ಯ ವಿಮಾ ಉತ್ಪನ್ನಗಳ ಮಾರಾಟಕ್ಕಾಗಿ ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿ ಹಾಗೂ ಇಫ್ಕೋ ಟೋಕಿಯೋ ಜನರಲ್ ಇನ್ಸೂರೆನ್ಸ್ ಕಂಪನಿಗಳೊಡನೆ ಸಂಸ್ಥೆಯು ಒಡಂಬಡಿಕೆ ಮಾಡಿಕೊಂಡಿದ್ದು, ಕಾರ್ಪೊರೇಟ್ ಏಜೆಂಟ್ ಆಗಿ ಕಾರ್ಯ ನಿರ್ವಹಿಸುತ್ತದೆ. ಪ್ರಸಕ್ತ 2022–23 ಹಣಕಾಸು ವರ್ಷದಲ್ಲಿ ಸಂಸ್ಥೆಯು 331.44 ಲಕ್ಷ ರೂ.ಗಳಷ್ಟು ವಿಮಾ ಕಂತುಗಳ ವ್ಯವಹಾರ ನೀಡಿ, 43.23 ಲಕ್ಷ ರೂ.ಗಳ ಕಮೀಷನ್ ಗಳಿಸಿದೆ (ಎರಡು ವಿಮಾ ಕಂಪನಿಗಳಿಂದ).

## ಹಣಕಾಸು ವರ್ಷ 2023-24ನೇ ಸಾಲಿನ ಮುನ್ನೋಟ:

ಕರ್ನಾಟಕ ರಾಜ್ಯವು ಆಕರ್ಷಕ ಹೂಡಿಕೆ ಕೇಂದ್ರವಾಗಿ ಹೊರಹೊಮ್ಮಿದೆ ಹಾಗೂ ಬಂಡವಾಳ ಹೂಡಿಕೆಗೆ ಪ್ರಮುಖ ಆಕರ್ಷಣೆಯಾಗಿರುತ್ತದೆ. ರಾಜ್ಯವು ಭಾರತದಲ್ಲಿ ಸಾಫ್ಟ್‌ವೇರ್ ರಫ್ತಿನಲ್ಲಿ ಮೊದಲ ಸ್ಥಾನದಲ್ಲಿದ್ದು ಹಾಗೂ ಸರಕು ರಫ್ತುಗಳಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಕರ್ನಾಟಕ ರಾಜ್ಯಕ್ಕೆ ವಿದೇಶಿ ನೇರ ಬಂಡವಾಳದ ಹೆಚ್ಚಿನ ಒಳ ಹರಿವು ದೊರೆತ್ತಿದ್ದು, ರಾಜ್ಯವು ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ. ರಾಜ್ಯದ ಅಭಿವೃದ್ಧಿಯ ಆಧಾರದ ಮೇಲೆ ಹಾಗೂ ಪ್ರಸ್ತುತ ಸಂಸ್ಥೆಯು ವಿಶೇಷ ಆಕರ್ಷಕ ಯೋಜನೆಗಳಾದ ಮಹಿಳಾ ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಉದ್ಯಮಿಗಳಿಗೆ ಶೇ.4ರ ಬಡ್ಡಿ ಸಹಾಯಧನ ಯೋಜನೆ ಹಾಗೂ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಲಭ್ಯವಿರುವ ಶೇ.6ರ ಬಡ್ಡಿ ಸಹಾಯಧನ ಯೋಜನೆಗಳ ಅನುಷ್ಠಾನದಿಂದ ಸಂಸ್ಥೆಗೆ ಹೆಚ್ಚಿನ ಸಾಲ ಮಂಜೂರಾತಿ ಹಾಗೂ ವಿತರಣೆಯಿಂದ ಕಾರ್ಯಾಚರಣೆ ನಿರ್ದಿಷ್ಟ ಗುರಿಯನ್ನು ತಲುಪಬಹುದಾಗಿದೆ.

## ಹಣಕಾಸು ವರ್ಷ 2023-24ಕ್ಕೆ ಕಾರ್ಯಾಚರಣೆಯ ಗುರಿ:

ಸಂಸ್ಥೆಯು ಮುಂದಿನ ಹಣಕಾಸು ವರ್ಷ ಹಣಕಾಸು ವರ್ಷ 2023-24ರಲ್ಲಿ ಈ ಕೆಳಗಿನ ಕಾರ್ಯಚರಣೆಯ ಗುರಿಯನ್ನು ಇರಿಸಿಕೊಂಡಿದೆ:

| | |
|---|---|
| ಮಂಜೂರಾತಿ: | ರೂ. 1100.00 ಕೋಟಿಗಳು |
| ವಿತರಣೆ: | ರೂ. 880.00 ಕೋಟಿಗಳು |
| ವಸೂಲಾತಿ: | ರೂ. 800.00 ಕೋಟಿಗಳು* |
| | (*290.00 ಕೋಟಿ ರೂ.ಗಳ ಬಡ್ಡಿ ವಸೂಲಾತಿ ಒಳಗೊಂಡಂತೆ) |

ಸಂಸ್ಥೆಯ ಕೆಲಸ ಕಾರ್ಯಗಳಿಂದ ಉತ್ತಮ ಫಲಿತಾಂಶ ಹೊರಹೊಮ್ಮುವ ರೀತಿಯಲ್ಲಿ ಸಂಯೋಜಿತ ಪ್ರಯತ್ನಗಳನ್ನು ಮಾಡಲಾಗುವುದು.

## ಕೃತಜ್ಞತೆಗಳು:

ಕರ್ನಾಟಕ ಸರ್ಕಾರವು ಸಂಸ್ಥೆಗೆ ಈಕ್ವಿಟಿ ನೆರವಿನ ಬೆಂಬಲ, ಬಡ್ಡಿ ಸಹಾಯಧನ ಬೆಂಬಲ ಹಾಗೂ ಸಣ್ಣ ಪ್ರಮಾಣದ ಸಾಲದ ಖಾತೆಗಳ ಬಾಕಿಯನ್ನು ಮುಕ್ತಾಯ ಗೊಳಿಸಲು ಸಹಕಾರ ನೀಡಿದ್ದಕ್ಕಾಗಿ ಸಂಸ್ಥೆಯ ನಿರ್ದೇಶಕರ ಮಂಡಳಿ ಮತ್ತು ನನ್ನ ವಿಶೇಷ ಕೃತಜ್ಞತೆಗಳನ್ನು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಸಲ್ಲಿಸುತ್ತೇನೆ.

ಸಂಸ್ಥೆಯ ಕಾರ್ಯಾಚರಣೆಯ ಪ್ರತಿಯೊಂದು ಹಂತದಲ್ಲೂ ಸಹಾಯ ಮತ್ತು ಮಾರ್ಗದರ್ಶನ ನೀಡಿದ್ದಕ್ಕಾಗಿ ಭಾರತೀಯ ಸಣ್ಣ ಕೈಗಾರಿಕಾ ಅಭಿವೃದ್ದಿ ಬ್ಯಾಂಕ್, ಭಾರತೀಯ ರಿಸರ್ವ್ ಬ್ಯಾಂಕ್ – ಭಾರತ ಸರ್ಕಾರ, ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಈ–ಗವರ್ನೆನ್ಸ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮಾಹಿತಿ ತಂತ್ರಜ್ಞಾನ ಇಲಾಖೆಗಳ ನಿರಂತರ ಬೆಂಬಲ ಹಾಗೂ ಮಾರ್ಗದರ್ಶನಕ್ಕಾಗಿ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಭಾರತೀಯ ಜೀವ ವಿಮಾ ನಿಗಮ, ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್, ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿ, ಎಸ್.ಬಿ.ಐ. ಜೀವವಿಮಾ ಕಂ.ಲಿ., ಇಫ್ಕೋ ಟೋಕಿಯೋ ಇನ್ಸೂರೆನ್ಸ್ ಕಂಪನಿ ಮತ್ತು ಕೈಗಾರಿಕಾ ಸಂಘ ಸಂಸ್ಥೆಗಳಾದ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ, ಅವೇಕ್, ಕಾನ್‌ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರೀಸ್, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಮುಂತಾದವುಗಳಿಗೂ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ವಾಣಿಜ್ಯ ಬ್ಯಾಂಕುಗಳು, ಅಪೆಕ್ಸ್ ಬ್ಯಾಂಕ್, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಆಭಿವೃದ್ಧಿ ನಿಗಮ, ಕರ್ನಾಟಕ ಕೈಗಾರಿಕಾ ವಲಯ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ವಿಶ್ವೇಶ್ವರಯ್ಯ ವಾಣಿಜ್ಯ ಅಭಿವೃದ್ಧಿ ನಿಗಮ, ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ (NSIC), MSME-DI, ಕರ್ನಾಟಕ ಉದ್ಯೋಗ ಮಿತ್ರ ಈ ಎಲ್ಲ ಸಂಸ್ಥೆಗಳ ಸಹಕಾರಕ್ಕಾಗಿ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ನಿರ್ದೇಶಕರಾಗಿದ್ದು ತಮ್ಮ ಸ್ಥಾನದಿಂದ ನಿರ್ಗಮಿಸುತ್ತಿರುವ ಶ್ರೀ ರಾಮಕೃಷ್ಣ ಜಿ.ಎ ಅವರು ತಮ್ಮ ಸೇವಾವಧಿಯಲ್ಲಿ ಸಲ್ಲಿಸಿದ ಸೇವೆಗಾಗಿ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಸಂಸ್ಥೆಯಿಂದ ನೆರವು ಪಡೆದಿರುವ ಎಲ್ಲಾ ಉದ್ದಿಮೆದಾರರು, ಸಂಸ್ಥೆಯ ಷೇರುದಾರರು ನೀಡಿದ ನಿರಂತರ ಸಹಾಯ ಹಾಗೂ ಸಂಸ್ಥೆಯ ಬಾಂಡ್‌ಗಳಲ್ಲಿ ಹಣ ತೊಡಗಿಸಿರುವ ಹೂಡಿಕೆದಾರರಿಗೂ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಭಾರತೀಯ ಸ್ಟೇಟ್ ಬ್ಯಾಂಕ್, ಹೆಚ್.ಡಿ.ಎಫ್.ಸಿ ಬ್ಯಾಂಕ್ ಹಾಗೂ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಇವರುಗಳು ಸಂಸ್ಥೆಗೆ ಸಕಾಲಕ್ಕೆ ಅವಧಿ ಸಾಲದ ನೆರವು ನೀಡಿರುವುದಕ್ಕೆ ನನ್ನ ವಿಶೇಷ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಕೊನೆಯದಾಗಿ, ಸಂಸ್ಥೆಯ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರ ಪರಿಶ್ರಮಕ್ಕಾಗಿ ನನ್ನ ಹೃತ್ಪೂರ್ವಕ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ.

ದಿನಾಂಕ : 16.06.2023

ಸ್ಥಳ : ಬೆಂಗಳೂರು

**ಅಧ್ಯಕ್ಷರು**

**Sri I S N Prasad,** IAS
**Chairman**
**Statement made at the**
**64th Annual General Meeting**
**held on 16th June 2023**

## Dear Shareholders,

It is my pleasure to welcome you all to the 64th Annual General Meeting of our Corporation. I am delighted to present the 64th Annual Report on the operations of the Corporation, together with, the audited statements of the accounts for the financial year ended 31st March, 2023.

During the Financial Year 2022-23, the Corporation consolidated its financial position and record profits by registering a profit before tax of Rs.138.78 crore and profit after tax of Rs.107.31 crore.

The Directors' report and the audited financial statements of accounts for the 64th year ended 31st March 2023 have already been placed with you. I presume, you had an opportunity to go through the report and hence I take it as read. However, I would like to take this opportunity to share with you some of the salient aspects of the report.

## Global Economy:

In general, global economic shocks in the past were severe but spaced out in time. This changed in the third decade of this

millennium. At least three shocks have hit the global economy since 2020. It all started with the pandemic-induced contraction of the global output, followed by the Russian-Ukraine conflict leading to a worldwide surge in inflation.

## Indian Economy:

For India, 2022 was special. It marked the 75th year of India's Independence 'Amrit Mahotsav'. India became the world's fifth largest economy, measured in current US dollars.

Indian economy real GDP is projected to grow by 7 percent in the FY2022-23. During the FY2022-23, agricultural sector is projected to grow by 3.5 percent. The industrial sector to witness modest growth of 4.1 percent. Whereas service sector to rebound with year on year growth of 9.1 percent in FY2022-23 over 8.4 percent in FY2021-22. The rebound in consumption has been driving by the pent-up demand for contact-intensive services which was followed by world's largest Covid-19 vaccination program.

The exports are estimated to grow at 12.5 percent in FY2022-23 despite sustained supply chain disruption and an uncertain geopolitical environment. The share of exports in GDP also increased to 22.70 percent in FY2022-23 compared to 21.50 percent in FY2021-22.

## Karnataka Economy:

Karnataka is a state of diverse cultures and languages and the economic and social scenario within the State, in many ways, mirrors the scenario prevalent in the country itself.

The state has increased the GSDP from Rs.19.62 lakh crore in 2021-22 to Rs.22.41 lakh crore in 2022-23 with a growth of 14.2 percent. Per Capita State Income (i.e. per capita NSDP) of Karnataka at current prices is estimated to be Rs.3,01,673.00 showing a rise of 13.6% during 2022-23, as against Rs.2,65,623.00 in 2021-22. Karnataka's per capita income is higher than All India per capita income.

The contribution of agriculture sector to the overall GSDP saw a marginal decrease from 15.36% to 15.08% in 2022-23 against 2021-22. Industry sector saw a marginal decrease from 21.48% to 20.88% in 2022-23 against 2021-22. The services sector, a largest component of GSDP saw a marginal increase from 63.16% in 2021-22 to 64.04% in 2022-23. The contribution of 'Real estate, Professional Services & Ownership of Dwellings' is highest with (34.31%) in 2022-23 followed by Computer related services and R&D (24.34%)', 'Manufacturing' (13.28%), 'Crops' (9.80%) and 'Trade and Repair Services' (9.52%).

Karnataka's total export performance during 2022-23 [from April-September 2022] is Rs.5,90,312.28 crore. Merchandise Exports during the period April to September 2022-23 as compared to April to September 2021-22 has witnessed a 26% growth. Services Exports during the year April to September 2022-23 as compared to April to September 2021-22 registered a 30% growth. The share of Electronics and Computer software is 80.54% and merchandise exports share is 19.46%.

During the FY2022-23, State Level Single Window Clearance Committee (SLSWCC) has approved is Rs.16,680.57 crore assistance towards 355 projects, which is projected to generate employment of 57,870 in the state. State High Level Clearance Committee (SHLCC) also has approved Rs.2,20,268.25 crore assistance towards 38 projects, which is projected to generate employment of 1,37,282 in the state.

Karnataka accounts for a significant share in the total FDI inflows in India. The total FDI inflows to the Karnataka state [Rs.41677.56 crore] stands second position to FDI inflows among 26 Indian states [Rs.2,10,156.27 crore] from April to September 2022.

MSME form an integral part of Industrialization in Karnataka. During FY2022-23 (upto November 2022) 5,85,504 MSMEs have been registered in the state expected to provide employment to 50,81,047 persons.

## STATE GOVERNMENT SUPPORT TO KSFC:

During the FY2022-23, the Government of Karnataka provided an equity capital of Rs.54.60 crore and interest subvention of Rs. 173.62 crore under various schemes operated through KSFC as indicated below:

| Sl. No. | Schemes | Interest Subvention Amt. [Rs. in Crore] |
|---|---|---|
| 1 | Scheduled Caste Entrepreneurs: | Rs. 55.87 |
| 2 | Scheduled Tribes Entrepreneurs: | Rs. 10.00 |
| 3 | Women Entrepreneurs: | Rs. 50.00 |
| 4 | Interest Subvention Scheme for All Categories Entrepreneurs & First Generation Entrepreneurs: | Rs.57.75 |
| | **Total** | **Rs. 173.62** |

## SUBSIDIES & GRANTS-IN-AID :

Under Textile Grant Scheme for Scheduled Caste and Scheduled Tribes Entrepreneurs, a grant amount of Rs.19.75 crore was released by Government of Karnataka.

## IMPORTANT POLICY DECISIONS DURING FY2022-23:

- Permitting the borrowers to pay the interest dues net of the interest subsidy for the loans sanctioned under interest subsidy scheme.
- Amendments of KSFC SBF Trust Regulations.
- Recruitment made to the post of Deputy Manager[Legal] for Kalyana Karnataka Region.
- Publication of KSFC C&R Rules 2022.
- Board has accorded its approval to fill up 05 drivers and 15 attender posts from the pending applications seeking appointment on compassionate grounds on seniority basis.
- Introduction of Modified Special Package scheme for establishing Textile Units promoted by SC/ST entrepreneurs.
- Extension of Modified Chronic Asset Resolution (MCAR) Scheme (Amended 2021) to Post MoU D-III / other NPA cases.

## OPERATIONAL HIGHLIGHTS:

### SANCTIONS:

During the FY2022-23, Sanction of loans under various schemes touched Rs.901.10 crore covering 710 cases as vis-a-vis Rs.493.25 crore covering 461 cases during FY2021-22. Cumulative Sanctions reached Rs.19,680.73 crore covering 1,75,833 cases as on 31.03.2023.

### DISBURSEMENT:

During the FY2022-23, the disbursement was Rs.445.81 crore vis-a-vis Rs.386.46 crore during FY2021-22. The cumulative disbursement of the Corporation has reached Rs.15,222.10 crore as on 31.03.2023.

### INVESTMENT, VALUE OF OUTPUT AND EMPLOYMENT:

The investment catalyzed by the Corporation during FY2022-23 is expected to be Rs.4,555.13 crore resulting in value of output to Rs.2,775.69 crore and generating employment to 11,235 persons.

### RECOVERY:

During the FY2022-23, the Corporation recovered an amount of Rs.763.71 crore as compared to Rs.741.89 crore recovered in the previous financial year. The Corporation realized recovery of Rs.63.51 crore in respect of Bad Debts [D-III (Pre MOU), D-III (Prudential) and (MR)] during FY2022-23.

## FINANCIAL RESULTS:

During the financial year under review, the Corporation earned a gross revenue of Rs.354.67 crore as against Rs.359.02 crore in FY2021-22. The Corporation achieved a record 'Profit before tax' of Rs.138.78 crore and profit after tax of Rs.107.31 crore for the FY2022-23.

## DIVIDEND:

Because of carried - forward losses, no dividend is recommended to the share holders of the Corporation, during the current financial year.

## TREASURY ACTIVITY:

During the year, the Government of Karnataka provided an equity capital of Rs.54.60 Crore. As on 31-03-2023, the paid up equity capital of the Corporation stood at Rs.945.39 crore, as compared to previous year of Rs 895.39 crore. During the year Rs.50.00 crore of share application money converted into share capital. The share application money as on 31.03.2023 stood at Rs 54.60 crore.

During the year the Corporation redeemed bonds amounting to Rs.225.00 crore. The outstanding of bonds decreased to Rs.475.00 crore during the current year, which was Rs.700.00 crore as on 31-03-2022.

During the financial year, the Corporation has availed term loan of Rs.100.00 crore from HDFC Bank. Further, Corporation has repaid Rs.885.83 crores to State Bank of India, Rs.20.00 crore to Union

Bank of India and Rs.18.33 crore to HDFC Bank towards term loan repayment.

The interest cost on bonds decreased to Rs.57.55 crore during the FY2022-23 from Rs 75.45 crore for the FY2021-22. The decrease is on account of reduction of bond liability. Further, the Corporation has paid Rs.17.53 crore to State Bank of India, Rs.0.18 crore to Union Bank of India and Rs.6.28 crore to HDFC Bank towards interest on term loans. The Corporation has paid, on cash basis, Rs.8.51 crore (net off of GST) to the State Government as guarantee commission during the FY2022-23 compared to Rs.12.22 crore (net off of GST) for the FY2021-22.

The total long-term liability of the Corporation is decreased to Rs.776.44 crore by the year end from Rs.1,025.60 crore as on 31-03-2022. The total interest and financial expenses decreased to Rs.93.33 crore for the financial year 2022-23 from Rs.118.54 crore for the financial year 2021-22.

## BUSINESS DEVELOPMENT AND CREDIT RESEARCH DEPARTMENT:

The department has represented the Corporation in Global Investors' Meet 2022 and other several industry related programs organized by KASSIA, FOWE Consortium of Women Entrepreneurs Association and Karnataka Aero Technical Advisory's business meet during FY2022-23. An amount of Rs.5.00 lakhs was contributed to industrial bodies as sponsorship & promotional activities.

## FINANCIAL SERVICE ACTIVITIES:

The Corporation is acting as a Corporate Agent for marketing of general insurance products. In this connection , the Corporation has entered into Memorandum of Understanding with M/s. United India Insurance Company Ltd., and M/s. IFFCO Tokio General Insurance Company Ltd. During the FY2022-23, the Corporation has earned a commission of Rs.43.23 lakhs [from both the insurance companies] by giving a business of Rs.331.44 lakhs in the form of insurance premium.

## FUTURE OUTLOOK FOR FY2023-24:

Our state has emerged as an attractive Investment Hub and single window affidavit-based projects clearances. State ranks first in software exports and stands fourth in merchandise exports in India. Karnataka state stand second position to FDI inflows among 26 Indian states. Prevailing growth economy of the State and presently available special attractive Schemes such as 6% Interest Subvention scheme for Micro and Small Industries and 4% Interest Subvention Schemes for Women Entrepreneurs and Scheduled Caste/Tribes Entrepreneurs, which enabled the Corporation to achieve targeted operational performance.

## OPERATIONAL TARGET FOR FY2023-24:

The Corporation has set the following operational targets for the FY2023-24 :

| | |
|---|---|
| Sanction : | Rs.1100.00 crore |
| Disbursement : | Rs. 880.00 crore |
| Recovery : | Rs. 800.00* crore (*Including interest recovery of Rs.290.00 crore) |

I hope concerted efforts will be made to achieve the target and to improve the working results of the Corporation.

## ACKNOWLEDGEMENTS:

I take this opportunity to thank and express my gratitude to the Government of Karnataka for all the support extended for the settlement of small loans, interest subsidy and equity support.

My special thanks to SIDBI, RBI, Government of India, Government of Karnataka's i.e., Departments of Finance, Industries and Commerce, E-Governance, Social Welfare, Horticulture, Information and Public Relations, Information Technology, Women and Child Welfare for their continued support.

I express my sincere thanks to LIC of India, SBI Life Insurance Company Limited, SHCIL, UIIC, IFFCO TOKIO General Insurance and Industrial Bodies viz: KASSIA, FKCCI, AWAKE, CII & other industrial associations for their continued support. I also express my thanks to the Commercial Banks, Apex Bank, KSSIDC, KIADB, KPTCL, VTPC, NSIC, MSME-DI and Karnataka Udyoga Mitra for their co-operation.

I would like to thank outgoing Director Sri. Ramakrishna G A for his guidance, support and contribution during his tenure as director.

I take this opportunity to thank the entrepreneurs for reposing faith in the Corporation, profuse gratitude to the shareholders for their unstinted support and the investors in the bond issues of the Corporation. I also thank State Bank of India, HDFC Bank and Union Bank of India for their timely support of term loans.

Finally, I wish to acknowledge the dedicated service and efforts of the officers and officials of the Corporation.

Date : 16.06.2023 **CHAIRMAN**

Place : Bangalore



**Karnataka State Financial Corporation**

'KSFC Bhavana', No. 1/1, Thimmaiah Road, Bengaluru - 560 052

Tel: 080 - 2226 3322 ✤ Fax: 080 - 2225 0126 / 2225 0136

contact.ksfc@karnataka.gov.in

www.ksfc.karnataka.gov.in @BengaluruKsfc

**Branch Offices : At all District Headquarters**

**KSFC** - *Your Partner in Progress*